21	ರಾಯಚೂರು	0.42613	4305278-00	4325000-00	8630278-00
			90342390-00	90425685-00	180768075-00

ವಿಷಯ: ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿರುವ ಡೊನೇಷನ್ ಹಾವಳಿ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1520 (2110)

ಶ್ರೀ ಕೆ. ಎಸ್. ಈಶ್ವರಪ್ಪ, (ಶಿವಮೊಗ್ಗ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕರ್ನಾಟಕ ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳ ದೇಣಿಗೆಯ ಹಾವಳಿ ಬಗ್ಗೆ ಸರ್ಕಾರವು ಗಮನಿಸಿದೆಯೇ?

ಆ ಈ ದೇಣಿಗೆಯ ಹಾವಳಿ ತಪ್ಪಿಸಲು ಸರ್ಕಾರದ ಯೋಜನೆ ಏನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಸರ್ಕಾರಕ್ಕೆ ಈ ಬಗ್ಗೆ ದೂರುಗಳು ಬಂದಿರುವುದಿಲ್ಲ.

ಆ ಸಮಗ್ರ ಶಿಕ್ಷಣ ಮಸೂದೆಯನ್ನು ರಾಷ್ಟ್ರಪತಿಯವರ ಅಂಗೀಕಾರಕ್ಕೆ ಕಳುಹಿಸಲಾಗಿದೆ. ಅದು ಜಾರಿಗೆ ಬಂದ ನಂತರ ದೇಣಿಗೆ ಪಿಡುಗನ್ನು ತೊಡೆದುಹಾಕಲು ಸಾಧ್ಯವಾಗುತ್ತದೆ.

ವಿಷಯ: ಟಿ. ಸಿ. ಹೆಚ್. ತರಬೇತಾದ ನಿರುದ್ಯೋಗಿ ಅಧ್ಯಾಪಕರ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1523 (2116)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕರ್ನಾಟಕ ರಾಜ್ಯದಲ್ಲಿ ಶಿಕ್ಷಕರ ತರಬೇತಿ ಈ ತನಕ ಮುಗಿಸಿರುವ ನಿರುದ್ಯೋಗಿ ಅಧ್ಯಾಪಕರೆಷ್ಟು?

ಆ ಅವರ ಬಗ್ಗೆ ಸರ್ಕಾರದ ಚಿಂತನೆ ಏನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಕರ್ನಾಟಕ ರಾಜ್ಯದಲ್ಲಿರುವ ನಿರುದ್ಯೋಗಿ ಟಿ.ಸಿ.ಹೆಚ್. ಅಭ್ಯರ್ಥಿಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಆದರೆ ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ 1991ನೇ ಡಿಸೆಂಬರ್ ಅಂತ್ಯದವರೆಗೆ 94,293 ಟಿ.ಸಿ.ಹೆಚ್ ಅಭ್ಯರ್ಥಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದರು. (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಕೊಡಲಾಗಿದೆ)

ಆ 1990-91ನೇ ಸಾಲಿನಿಂದ ಶಿಕ್ಷಣ ಇಲಾಖೆಯು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಂಡಿದೆ. ಹೆಚ್ಚಿನ ವಿದ್ಯಾರ್ಥಿಗಳು ಟಿ.ಸಿ.ಹೆಚ್. ತರಬೇತಿಗಳಿಂದ ಹೊರಬರುವುದನ್ನು ತಡೆಯಲು 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ ಯಾವುದೇ ಶಿಕ್ಷಕರ ತರಬೇತಿ ಕಾಲೇಜುಗಳನ್ನು ಪ್ರಾರಂಭಿಸುವ ಅವಶ್ಯಕತೆ ಇಲ್ಲವೆಂದು ಸರ್ಕಾರವು ನಿರ್ಧರಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2116ಕ್ಕೆ
ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಅಭ್ಯರ್ಥಿಗಳ ಸಂಖ್ಯೆ
1	ಬೆಂಗಳೂರು	8966
2	ಬೆಳಗಾವಿ	8591
3	ಬಳ್ಳಾರಿ	5621
4	ಬೀದರ್	4784
5	ಬಿಜಾಪುರ	12919
6	ಚಿಕ್ಕಮಗಳೂರು	1856
7	ಚಿತ್ರದುರ್ಗ	6447
8	ಧಾರವಾಡ	8527
9	ಗುಲ್ಬರ್ಗ	5414
10	ಹಾಸನ	1815
11	ಕೊಡಗು	754
12	ಕೋಲಾರ	3860
13	ಮಂಡ್ಯ	2208
14	ಮೈಸೂರು	3308
15	ಉತ್ತರ ಕನ್ನಡ	3603
16	ರಾಯಚೂರು	3593
17	ಶಿವಮೊಗ್ಗ	4141
18	ದಕ್ಷಿಣ ಕನ್ನಡ	2629
19	ತುಮಕೂರು	5257
	ಒಟ್ಟು	94293

ವಿಷಯ: ಪವಿತ್ರ ಸ್ಥಳ ಆದಿಚುಂಚನಗಿರಿ ಮಠಕ್ಕೆ ಬಸ್ ಸೌಕರ್ಯ ಒದಗಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1524 (2122)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಪವಿತ್ರ ಸ್ಥಳದಿಂದ ಮಲೈಮಾದೇಶ್ವರ ಬೆಟ್ಟಕ್ಕೆ ಒದಗಿಸಿರುವಂತೆ ಆದಿಚುಂಚನಗಿರಿ ಮಠಕ್ಕೆ ಮತ್ತು ಗ್ರಾಮಾಂತರ ಮೆಡಿಕಲ್ ಮಹಾ ವೈದ್ಯಕೀಯ ಆಸ್ಪತ್ರೆಗೆ ಬಸ್ ಸೌಕರ್ಯ ಕಲ್ಪಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ?